ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (433)320
ಸದಸ್ಯರ ಹೆಸರು : ಶ್ರೀ ನರೇಂದ್ರಬಾಬು ಎನ್.ಎಲ್
ಉತ್ತರಿಸುವವರು : (ಶ್ರೀ ಎಸ್.ಎನ್.ಕೃಷ್ಣಯ್ಯ ಶೆಟ್ಟಿ)
: ಮಾನ್ಯ ವಸತಿ ಹಾಗೂ ಮುಜರಾಯಿ ಸಚಿವರು

ಅ ನಮ್ಮ ಯೋಜನೆಯಲ್ಲಿ ಕೇಂದ್ರ ಸರ್ಕಾರದಿಂದ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಗೆ ಬಿಡುಗಡೆಯಾದ ಹಣ ಎಷ್ಟು;

ನರ್ಮ್ ಯೋಜನೆಯಲ್ಲಿ ಕೇಂದ್ರ ಸರ್ಕಾರದಿಂದ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಗೆ ರೂ. 6070.42 ಲಕ್ಷಗಳು ಹಣ ಬಿಡುಗಡೆಯಾಗಿರುತ್ತದೆ.

ಆ ಹಾಗಿದ್ದಲ್ಲಿ, ರಾಜ್ಯ ಹಾಗೂ ಕೇಂದ್ರ ಸರ್ಕಾರದಿಂದ ವಿವಿಧ ಯೋಜನೆಗಳಿಗಾಗಿ ಮಂಡಳಿಗೆ ಬಿಡುಗಡೆಯಾದ ಹಣ ಎಷ್ಟು; (ಮೂರು ವರ್ಷಗಳ ಸಂಪೂರ್ಣ ಮಾಹಿತಿ ನೀಡುವುದು);

ರಾಜ್ಯ ಹಾಗೂ ಕೇಂದ್ರ ಸರ್ಕಾರದ ಜವಹರಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ ಮಿಷನ್‌ನ (JNNURM) ನಗರ ಬಡಜನರಿಗೆ ಮೂಲಸೌಕರ್ಯ (BSUP) ಮತ್ತು ಸಮಗ್ರ ವಸತಿ ಕೊಳಚೆ ಪ್ರದೇಶ ಅಭಿವೃದ್ಧಿ ಯೋಜನೆಯಡಿ (IHSDP) ಮಂಡಳಿಗೆ ಬಿಡುಗಡೆಯಾದ ಹಣ ಈ ಕೆಳಕಂಡಂತಿದೆ.

(ರೂ.ಲಕ್ಷಗಳಲ್ಲಿ)

ವರ್ಷ	ಬಿಎಸ್‌ಯುಪಿ	ಐಹೆಚ್‌ಎಸ್‌ಡಿಪಿ	ಒಟ್ಟು
2005–06	00	00	00
2006–07	4343.67	00	4343.67
2007–08	1062.32	3289.62	4351.94
ಒಟ್ಟು	**5405.99**	**3289.62**	**8695.61**

ಇ ರಾಜ್ಯದಲ್ಲಿ ಕೊಳಚೆ ನಿರ್ಮೂಲನ ಮಂಡಳಿಗೆ ವಸತಿ ಹಂಚಿಕೆಗಾಗಿ ಅರ್ಜಿಸಲ್ಲಿಸಿರುವವರ ಸಂಖ್ಯೆ ಎಷ್ಟು; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

ಕೊಳಚೆ ನಿರ್ಮೂಲನ ಮಂಡಳಿಗೆ ವಸತಿ ಹಂಚಿಕೆಗಾಗಿ ಬೆಂಗಳೂರು ನಗರದಲ್ಲಿ ಸುಮಾರು 5377 ಕೊಳಚೆ ಪ್ರದೇಶದ ನಿವಾಸಿಗಳಲ್ಲದವರು ಅರ್ಜಿ ಸಲ್ಲಿಸಿರುತ್ತಾರೆ. ಇತರೆ ಜಿಲ್ಲೆಗಳಲ್ಲಿನ ನಿವಾಸಿಗಳಿಂದ ಅರ್ಜಿ ಬಂದಿರುವುದಿಲ್ಲ.

ಈ ಈ ಹಂಚಿಕೆಗಾಗಿ ಯಾವ ರೀತಿಯ ಮಾನದಂಡಗಳನ್ನು ಅನುಸರಿಸಲಾಗುವುದು;

ಘೋಷಿತ ಕೊಳಚೆ ಪ್ರದೇಶದಲ್ಲಿ ವಾಸವಾಗಿದ್ದು, ಮಂಡಳಿ ನಡೆಸಿದ ಆರ್ಥಿಕ ಮತ್ತು ಸಾಮಾಜಿಕ ಸಮೀಕ್ಷಾ ಪಟ್ಟಿಯಲ್ಲಿ ದಾಖಲಾಗಿರುವ ನಿವಾಸಿಗಳು ಮನೆ ಹಂಚಿಕೆಗೆ ಅರ್ಹರಿರುತ್ತಾರೆ.

ಇ ಈವರೆವಿಗೂ ಕೊಳಚೆ ನಿರ್ಮೂಲನ ಮಂಡಳಿಗೆ ಸರ್ಕಾರದಿಂದ ಎಷ್ಟು ಜಮೀನು ಮಂಜೂರು ಮಾಡಲಾಗಿದೆ. ಇವುಗಳ ಜಿಲ್ಲಾವಾರು ಮಾಹಿತಿ ನೀಡುವುದು; ಇವುಗಳಲ್ಲಿ ಎಷ್ಟು ಜಮೀನುಗಳಲ್ಲಿ ವಸತಿಗಳನ್ನು ನಿರ್ಮಾಣ ಮಾಡಲಾಗಿದೆ; (ಸಂಪೂರ್ಣ ಮಾಹಿತಿ ನೀಡುವುದು);

ಈವರೆವಿಗೂ ಕೊಳಚೆ ನಿರ್ಮೂಲನ ಮಂಡಳಿಗೆ ಸರ್ಕಾರದಿಂದ 490.00 ಎಕರೆ ಜಮೀನನ್ನು ಮಂಜೂರು ಮಾಡಲಾಗಿದ್ದು, ಜಿಲ್ಲಾವಾರು ವಿವರ ಹಾಗೂ ವಸತಿ ನಿರ್ಮಾಣದ ವಿವರಗಳನ್ನು **ಅನುಬಂಧ–"ಅ"** ನಲ್ಲಿ ಲಗತ್ತಿಸಿದೆ.
490.00 ಎಕರೆ ಪೈಕಿ 232.00 ಎಕರೆ ಜಮೀನಿನಲ್ಲಿ ವಿವಿಧ ಯೋಜನಗಳಡಿಯಲ್ಲಿ ಮನೆಗಳನ್ನು ನಿರ್ಮಿಸಲಾಗಿರುತ್ತದೆ.

ಊ ಮಂಡಳಿಯ ಮನೆಗಳನ್ನು ನಿರ್ಮಾಣ ಮಾಡಲಾದ ಜಿಲ್ಲೆಗಳಾವುವು; ಇವುಗಳ ಕಾಮಗಾರಿಗಳು ಯಾವ ಹಂತದಲ್ಲಿದೆ;

ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ ವತಿಯಿಂದ ಹುಡ್ಕೋ ಯೋಜನೆಯಡಿ 27116 ಮನೆಗಳು, ವಿಶೇಷ ಘಟಕ ಯೋಜನೆಯಡಿ (ಪರಿಶಿಷ್ಟ ಜಾತಿಯವರಿಗಾಗಿ) 3080 ಮನೆಗಳು ಹಾಗೂ ವಾಂಬೆ ಯೋಜನೆಯಡಿ 34538 ಮನೆಗಳು ಒಟ್ಟು 64734 ಮನೆಗಳಲ್ಲಿ 751 (ವಾಂಬೆ) ಮನೆಗಳನ್ನು ಹೊರತುಪಡಿಸಿ ಉಳಿದ ಮನೆಗಳು ಪೂರ್ಣಗೊಂಡಿದ್ದು, ಹಂಚಿಕೆ ಮಾಡಲಾಗಿದೆ. ಜಿಲ್ಲಾವಾರು ವಿವರಗಳನ್ನು **ಅನುಬಂಧ–"ಆ"**ನಲ್ಲಿ ಒದಗಿಸಲಾಗಿದೆ.

ಋ ಪ್ರತಿ ಯೋಜನೆಗಳಿಗೆ ಬಿಡುಗಡೆ ಮಾಡಿದ ಹಣವೆಷ್ಟು; (ಸಂಪೂರ್ಣ ವಿವರಗಳನ್ನು ನೀಡುವುದು);

ಈ ಯೋಜನೆಗಳಿಗೆ ಬಿಡುಗಡೆ ಮಾಡಿದ ಹಣದ ವಿವರಗಳು ಈ ಕೆಳಕಂಡಂತಿವೆ;

(ರೂ.ಲಕ್ಷಗಳಲ್ಲಿ)

ಹುಡ್ಕೋ	ಎಸ್.ಸಿ.ಪಿ	ವಾಂಬೆ
3108.60	1078.00	14849.60

ಎ ಕೊಳಚೆ ನಿರ್ಮೂಲನ ಮಂಡಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಬಿಡುಗಡೆ ಮಾಡಿದ ಹಣ ಎಷ್ಟು; ಮೂರು ವರ್ಷದ ಹಣದ ವಿವರಗಳನ್ನು ಹಾಗೂ ಕಾರ್ಯಕ್ರಮಗಳನ್ನು ನಡೆಸಲು ಯಾವ ಯಾವ ಸರ್ಕಾರೇತರ ಸಂಘಸಂಸ್ಥೆಗಳಿಗೆ ಹಣ ಬಿಡುಗಡೆ ಮಾಡಲಾಗಿದೆ; (ಸಂಪೂರ್ಣ ಮಾಹಿತಿಗಳನ್ನು ನೀಡುವುದು);

ಕೇಂದ್ರ ಪ್ರಾಯೋಜಿತ ಜವಹರಲಾಲ್ ನೆಹರು ರಾಷ್ಟ್ರೀಯ ನಗರ ನವೀಕರಣ ಮಿಷನ್‌ನ (JNNURM) ನಗರ ಬಡಜನರಿಗೆ ಮೂಲಸೌಕರ್ಯ (BSUP) ಯೋಜನೆಯಡಿಯಲ್ಲಿ ಜಾಗೃತಿ (IEC) ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಮೊದಲನೇ ಹಂತದಲ್ಲಿ ಬೆಂಗಳೂರು ಮತ್ತು ಮೈಸೂರು ನಗರಗಳಿಗೆ ಕ್ರಮವಾಗಿ 2006–07ರಲ್ಲಿ ರೂ. 1.12 ಕೋಟಿಗಳನ್ನು ಮತ್ತು 2007–08ರಲ್ಲಿ ರೂ. 0.50 ಕೋಟಿಗಳನ್ನು ಮಂಡಳಿಗೆ ಬಿಡುಗಡೆ ಮಾಡಲಾಗಿದೆ.

2005–06 ಮತ್ತು 2006–07ನೇ ಸಾಲಿನಲ್ಲಿ ಜಾಗೃತಿ(IEC) ಕಾರ್ಯಕ್ರಮ ಹಮ್ಮಿಕೊಂಡಿರುವುದಿಲ್ಲ. 2007–08ನೇ ಸಾಲಿನಲ್ಲಿ ಜಾಗೃತಿ (IEC) ಕಾರ್ಯಕ್ರಮಗಳಿಗೆ ಸರ್ಕಾರದ ಆದೇಶದ ಸಂಖ್ಯೆ: ನಆಇ 149 ಸಿಎಸ್‌ಎಸ್ 2007, ದಿನಾಂಕ: 01–02–2008ರಲ್ಲಿ ಬೆಂಗಳೂರು ನಗರಕ್ಕೆ ಮೆ: ಫೈತ್ ಹೆಲ್ತ್‌ಕೇರ್ ಪೈ ಲಿ. ಬೆಂಗಳೂರು ಸಂಸ್ಥೆಗೆ ರೂ. 3.31 ಕೋಟಿಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿದ್ದು, ಈ ಪೈಕಿ ರೂ. 99.44 ಲಕ್ಷಗಳನ್ನು ಈ ಸಂಸ್ಥೆಗೆ ಬಿಡುಗಡೆ ಮಾಡಿದೆ.

ಮೈಸೂರು ನಗರಕ್ಕೆ ಮೆ: ಕಲ್ಪತರು ಶಿಕ್ಷಣ ಮತ್ತು ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಚಿತ್ರದುರ್ಗ ಇವರಿಗೆ ರೂ. 1.38 ಕೋಟಿಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿದ್ದು, ಈ ಪೈಕಿ ರೂ. 39.56 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಅನುಬಂಧ–"ಆ"

ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿ ವತಿಯಿಂದ ನಿರ್ಮಾಣ ಮಾಡಲಾದ ಜಿಲ್ಲಾವಾರು ಮನೆಗಳ ವಿವರ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ವಸತಿ ಯೋಜನೆ			ಒಟ್ಟು
		ಹುಡ್ಕೋ	ಎಸ್.ಪಿ.ಪಿ	ಪಾಂಬೆ	
1	ಬೆಂಗಳೂರು ನಗರ	7232	0	5154	12386
2	ಬೆಂಗಳೂರು ಗ್ರಾಮಾಂತರ	778	275	623	1676
3	ಬಾಗಲಕೋಟೆ	100	25	2404	2529
4	ಬಳ್ಳಾರಿ	1104	0	3375	4479
5	ಬೆಳಗಾಂ	531	0	2562	3093
6	ಬೀದರ್	968	24	3134	4126
7	ಬಿಜಾಪುರ	1062	200	1381	2643
8	ಚಿಕ್ಕಮಗಳೂರು	98	0	122	220
9	ಚಿತ್ರದುರ್ಗ	470	130	1189	1789

10	ಚಾಮರಾಜನಗರ	568	143		0	711
11	ದಾವಣಗೆರೆ	278	100		1165	1543
12	ಧಾರವಾಡ	1817	47		3565	5429
13	ದಕ್ಷಿಣ ಕನ್ನಡ	0	0		0	0
14	ಗದಗ್	430	44		941	1415
15	ಗುಲ್ಬರ್ಗ	1566	280		2595	4441
16	ಹಾಸನ	1957	314		496	2767
17	ಹಾವೇರಿ	399	138		119	656
18	ಕೊಡಗು	0	0		0	0
19	ಕೋಲಾರ	1152	441		976	2569
20	ಕೊಪ್ಪಳ	813	82		398	1293
21	ಮಂಡ್ಯ	872	342		245	1459
22	ಮೈಸೂರು	2787	144		763	3694
23	ರಾಯಚೂರು	783	150		1801	2734
24	ಶಿವಮೊಗ್ಗ	143	104		753	1000
25	ತುಮಕೂರು	672	55		394	1121
26	ಉತ್ತರಕನ್ನಡ	436	42		383	861
27	ಉಡುಪಿ	100	0		0	100
	ಒಟ್ಟು	**27116**	**3080**		**34538**	**64734**

"ಅನುಬಂಧ–ಆ"

ರಾಜ್ಯ ಸರ್ಕಾರದಿಂದ ಮಂಡಳಿಗೆ ಮಂಜೂರಾಗಿರುವ ಜಮೀನು ಮತ್ತು ನಿರ್ಮಿಸಿರುವ ಮನೆಗಳು ಹಾಗೂ ನಿರ್ಮಿಸಿಬೇಕಾಗಿರುವ ಮನೆಗಳ ವಿವರಗಳು.

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಮಂಡಳಿಗೆ ಮಂಜೂರು ಮಾಡಿರುವ ಜಮೀನಿನ ವಿಸ್ತೀರ್ಣ	ಮಂಡಳಿ ವತಿಯಿಂದ ನಿರ್ಮಿಸಿರುವ ಮನೆಗಳ ವಿವರ	ಷರಾ
1.	ಬೆಂಗಳೂರು ನಗರ	ಎ – ಗು 137.24	3145	3145 ಮನೆಗಳನ್ನು ಸುಮಾರು 77 ಎಕರೆ ಜಮೀನಿನಲ್ಲಿ ನಿರ್ಮಿಸಲಾಗಿದೆ.
2.	ಬೆಂಗಳೂರು ಗ್ರಾಮಾಂತರ	–	–	
3.	ಬಾಗಲಕೋಟೆ	40–00	1238	
4.	ಬಳ್ಳಾರಿ	9–00	300	300 ಮನೆಗಳನ್ನು ನಿರ್ಮಿಸಲಾಗಿರುತ್ತದೆ.
5.	ಬೆಳಗಾಂ	5–20	145	ಸದರಿ ಜಮೀನಿನಲ್ಲಿ 145 ಮನೆಗಳನ್ನು IHSDP ಯೋಜನೆಯಡಿಯಲ್ಲಿ ನಿರ್ಮಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.
6.	ಬೀದರ್	16–20	640	640 ಮನೆಗಳನ್ನು ನಿರ್ಮಿಸಲಾಗಿದೆ
7.	ಬಿಜಾಪುರ	8–00		
8.	ಚಿಕ್ಕಮಗಳೂರು	–		
9.	ಚಿತ್ರದುರ್ಗ	20–12	470	
10.	ಚಾಮರಾಜನಗರ	29–34		ಸದರಿ ಜಮೀನಿನ ಪೈಕಿ 25 ಎಕರೆ ಪ್ರದೇಶದಲ್ಲಿ IHSDP ಯೋಜನೆಯಡಿಯಲ್ಲಿ ಮನೆ ನಿರ್ಮಾಣ ಮಾಡಬೇಕಾಗಿದೆ.
11.	ದಾವಣಗೆರೆ	–	–	

12.	ಧಾರವಾಡ	34–00		
13.	ದಕ್ಷಿಣ ಕನ್ನಡ	1–33		
14.	ಗದಗ್	13–00		ಸದರಿ ಜಮೀನಿನಲ್ಲಿ IHSDP ಯೋಜನೆಯಡಿಯಲ್ಲಿ ಈಗಾಗಲೇ 500 ಮನೆಗಳ ಕಾಮಗಾರಿಯು ಪ್ರಗತಿಯಲ್ಲಿದೆ.
15.	ಗುಲ್ಬರ್ಗ	9–10	328	328 ಮನೆಗಳನ್ನು ನಿರ್ಮಿಸಲಾಗಿರುತ್ತದೆ
16.	ಹಾಸನ	42–13	1196	1196 ಮನೆಗಳನ್ನು 26 ಎಕರೆ ಜಮೀನಿನಲ್ಲಿ ನಿರ್ಮಿಸಿದೆ. ಉಳಿದ ಪ್ರದೇಶದಲ್ಲಿ IHSDP ಯೋಜನೆಯಡಿ ಮನೆಗಳನ್ನು ನಿರ್ಮಿಸುವ ಕಾರ್ಯಕ್ರಮ ಹಮ್ಮಿಕೊಂಡಿವೆ
17.	ಹಾವೇರಿ	–	–	
18.	ಕೊಡಗು	–	–	
19.	ಕೋಲಾರ	27–28	1398	16.28 ಎಕರೆ ಪ್ರದೇಶದಲ್ಲಿ 1398 ಮನೆಗಳನ್ನು ನಿರ್ಮಿಸಿದೆ. ಉಳಿದ ಜಮೀನಿನಲ್ಲಿ IHSDP ಯೋಜನೆಯಡಿ ಮನೆಗಳನ್ನು ನಿರ್ಮಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ
20.	ಕೊಪ್ಪಳ್	3–00	200	200 ಮನೆಗಳನ್ನು ನಿರ್ಮಿಸಿದೆ
21.	ಮಂಡ್ಯ	25–08	932	932 ಮನೆಗಳನ್ನು ನಿರ್ಮಿಸಿದೆ

22.	ಮೈಸೂರು	38–07	765	25 ಎಕರೆ ಜಮೀನಿನಲ್ಲಿ ನರ್ಮ್ ಯೋಜನೆಯಡಿ ಮನೆಗಳನ್ನು ನಿರ್ಮಿಸಲು ಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ
23.	ರಾಯಚೂರು	13–07	444	444 ಮನೆಗಳನ್ನು ನಿರ್ಮಿಸಲಾಗಿದೆ
24.	ಶಿವಮೊಗ್ಗ	–	–	
25.	ತುಮಕೂರು	9–26	496	496 ಮನೆಗಳನ್ನು ನಿರ್ಮಿಸಲಾಗಿದೆ
26.	ಉತ್ತರ ಕನ್ನಡ	–	–	
27.	ಉಡುಪಿ	6–00		
	ಒಟ್ಟು ವಿಸ್ತೀರ್ಣ	490–00		

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : (492)321
ಸದಸ್ಯರ ಹೆಸರು : ಶ್ರೀ ಎನ್.ಎಲ್.ನರೇಂದ್ರಬಾಬು
ಉತ್ತರಿಸುವ ಸಚಿವರು : (ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ)
: ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

ಅ) ಏಕರೂಪ ಭಾಷಾನೀತಿ ಜಾರಿಗೊಳಿಸಲು ಸಾಹಿತಿ ಪ್ರೊ : ರಾಜಪ್ಪ ದಳವಾಯಿ ನೇತೃತ್ವದ ತಜ್ಞರ ಸಮಿತಿ ನೀಡಿರುವ ವರದಿ ಸರ್ಕಾರದ ಪರಿಶೀಲನೆಯಲ್ಲಿ ಇದೆಯೇ; ಇದ್ದಲ್ಲಿ, ಕೈಗೊಂಡ ಕ್ರಮಗಳೇನು (ಸಂಪೂರ್ಣ ಮಾಹಿತಿ ನೀಡುವುದು);

ಇಲ್ಲ, ರಾಜ್ಯ ಸರ್ಕಾರ ಅಂತಹ ಯಾವುದೇ ಸಮಿತಿಗಳನ್ನು ರಚಿಸಿರುವುದಿಲ್ಲ.

ಆ) ಪ್ರೊ : ರಾಜಪ್ಪ ದಳವಾಯಿ ನೇತೃತ್ವದ ತಜ್ಞರ ಸಮಿತಿ ನೀಡಿರುವ ವರದಿಯಲ್ಲಿನ ಪ್ರಮುಖ ಶಿಫಾರಸ್ಸುಗಳೇನು; ಆ ಶಿಫಾರಸ್ಸುಗಳನ್ನು ಜಾರಿಗೊಳಿಸಲು ಇರುವ ಅಡೆತಡೆಗಳೇನು (ಸಂಪೂರ್ಣ ಮಾಹಿತಿ ನೀಡುವುದು);

ಇ) ಪ್ರೊ : ರಾಜಪ್ಪ ದಳವಾಯಿ ನೇತೃತ್ವದ ತಜ್ಞರ ಸಮಿತಿ ನೀಡಿರುವ ವರದಿಯನ್ನು ಜಾರಿಗೊಳಿಸಲು ಸಾರ್ವಜನಿಕ ಶಿಕ್ಷಣ ಇಲಾಖೆಯ ಉನ್ನತ ಅಧಿಕಾರಿಗಳು ಹಿಂಜರಿಯುತ್ತಿರುವುದು ಏಕೆ; ವರದಿಯಲ್ಲಿ ಭಾಷಾನೀತಿ ಉಲ್ಲಂಘಿಸಲು ನೆರವಾದ ಇಲಾಖೆಯ ಅಧಿಕಾರಿಗಳ ಮೇಲೆ ಕ್ರಮ ಜರುಗಿಸಲು ಅಗ್ರಹಪಡಿಸಲಾಗಿದೆಯೇ (ಸಂಪೂರ್ಣ ವಿವರ ನೀಡುವುದು);